ದಿನಾಂಕಃ21-12-2023 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ ಜಿ ಎಸ್ ವಕೀಲರಿಂದಃ**

ದೊಂದರಘಟ್ಟ ಗ್ರಾಮದ ಸರ್ವೆ ನಂ 115 ಒಟ್ಟು ವಿಸ್ತೀರ್ಣ 6 ಎಕರೆ 33 ಗುಂಟೆ ಎಂದರೆ ಸರಿ. ಸದರಿ ಜಮೀನಿನಲ್ಲಿ 8 ಪೋಡುಗಳಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯನ್ನು ಸರ್ವೆ ನಂ 115/5 ಕ್ಕೆ ಹೂಡಿರುತ್ತೇನೆ. ಹಾಗಾಗಿ ದಾವೆಯನ್ನು ಸರ್ವೆ ನಂ 115 ಕ್ಕೆ ಹೂಡಿರುತ್ತೇನೆ. ಸರ್ವೆ ನಂ. 115 ರಲ್ಲಿ 1 ರಿಂದ 8 ರವರೆಗೂ ಪೋಡಿಯಾಗಿರುತ್ತದೆ ಎಂದರೆ ಸರಿ. ನಾನು ಸದರಿ ಪೋಡುಗಳನ್ನು ಸರಿಯಿಲ್ಲ ಎಂದು ಪ್ರಶ್ನಿಸಿ ಡಿಡಿಎಲ್‌ಆರ್ ದಾವಣಗೆರೆ ಯವರಿಗೆ ಮೇಲ್ಮನವಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಹಾಗಾಗಿ ಸದರಿ ಸರ್ವೆ ನಂಬರಿನಲ್ಲಿ ಯಾವ ಯಾವ ಜಮೀನು ಯಾರು ಯಾರಿಗೆ, ಎಷ್ಟು ಎಷ್ಟು ವಿಸ್ತೀರ್ಣದ್ದು ಎಂದು ನಮಗೆ ನಿಗದಿಯಾಗಿಲ್ಲ ಎಂದರೆ ಸಾಕ್ಷಿ ಸರ್ವೆ ನಂ 115/ 2 ರಲ್ಲಿ 1 ಎಕರೆ 5 ಗುಂಟೆ , 115/5 ರಲ್ಲಿ 17 ಗುಂಟೆ ಜಮೀನು ಇದೆ. ಸದರಿ 17 ಗುಂಟೆ ಜಮೀನನ್ನು ನಾನು ಇಂದ್ರಮ್ಮನವರಿಂದ ಖರೀದಿಸಿರುತ್ತೇನೆ. ಸರ್ವೆ ನಂ 115/8 ನ್ನು ನಾನೇ ಅರ್ಜಿ ಕೊಟ್ಟು ಪೋಡು ಮಾಡಿಸಿರುತ್ತೇನೆ ಎಂದರೆ ಸಾಕ್ಷಿ ನನಗೆ ನೋಟಿಸನ್ನು ನೀಡದೆ ಹದುಬಸ್ತು ಮಾಡಿರುತ್ತಾರೆ ಮತ್ತು ನನ್ನ ಅನುಭವದ ಜಮೀನಿಗೆ ಆಗಾಗ ತೊಂದರೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಭೂವಿಯ ಅಫೀಲು ನಂ 43/2019-20 ರಂತೆ ನಾನು ಹೂಡಿದ ಮೇಲ್ಮನವಿ ಎಂದು ಸಾಕ್ಷಿ ನೋಡಿ ಗುರುತಿಸಿ ಒಪ್ಪಿದ ಮೇರೆಗೆ ಅದನ್ನು **ನಿಡಿ-1 ಎಂದು ಗುರುತಿಸಲಾಯಿತು.** ಸರ್ವೆ ನಂ 115/1 ರಲ್ಲಿ 1 ಎಕರೆ 7 ವರೆ ಗುಂಟೆ , 115/3 ರಲ್ಲಿ 1 ಎಕರೆ 5 ಗುಂಟೆ , 115/4 ರಲ್ಲಿ 34 ಗುಂಟೆ, 115/6 ರಲ್ಲಿ 33 ವರೆ ಗುಂಟೆ, 115/7 ರಲ್ಲಿ 34 ಗುಂಟೆ, 115/8 ರಲ್ಲಿ 17 ಗುಂಟೆ ಜಮೀನು ಇದೆ ಎಂದರೆ ಸರಿ. ನಾನು ನನ್ನ ನಿಡಿ-1 ರಲ್ಲಿ ಉಲ್ಲೇಖಿಸಿರುವಂತೆ 115 ರ ಪೋಡಿಗಾಗಿ ನಾನೇ ಅರ್ಜಿ ಸಲ್ಲಿಸಿ ಪೋಡು ಮಾಡಿಸಿರುತ್ತೇನೆ ಎಂದು ಉಲ್ಲೇಖವಿದೆ ಎಂದರೆ ಸರಿಯಲ್ಲ. ನಾನು ನನ್ನ ದಾವಾಪತ್ರದ 7 ನೇ ಪ್ಯಾರದಲ್ಲಿ ಪೋಡು ಮಾಡಿಸಿಕೊಂಡಿದ್ದೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗಾಗಿ ಸರ್ವೆ ನಂ 115 ರ ಜಮೀನು ಪೋಡು ಆಗಿದೆ ಎಂದರೆ ಸರಿಯಲ್ಲ. ನಾನು ಸರ್ವೆ ನಂ 115/2 ಮತ್ತು 115/5 ರಲ್ಲಿ ಇರುವ ಜಮೀನುಗಳನ್ನು ನಾನು ಖರೀದಿಸಿದ್ದು ಸದರಿ ಖರೀದಿಸುವ ಸಮಯಕ್ಕೆ ಅವು ಪೋಡು ಆಗಿದ್ದವು ಎಂದರೆ ಸರಿ. ಸದರಿ ಪೋಡು ಆದ ಜಮೀನುಗಳಿಗೆ ಬಾಂದ್ ಕಲ್ಲುಗಳನ್ನು ನೆಡುತ್ತಾರೆ ಎಂದರೆ ಸರಿ. ಬಾಂದ್ ಕಲ್ಲುಗಳ ಪ್ರಕಾರ ಯಾವ ಯಾವ ಜಮೀನುಗಳು ಯಾರು ಯಾರಿಗೆ ಎಂದು, ಅವರವರ ಹೆಸರಿಗೆ ಸರ್ವೆ ದಾಖಲೆಗಳಲ್ಲಿ ಮತ್ತು ಖಾತೆ ಮತ್ತು ಪಹಣಿಯಲ್ಲಿ ನಮೂದಾಗಿದೆ ಎಂದರೆ ಸರಿ.

ನಾನು ನಿಡಿ-1 ರಂತೆ ಸಲ್ಲಿಸಿರುವ ಮೇಲ್ಮನವಿ ದಿಃ 27-08-2019 ರಂದು ವಜಾ ಆಗಿದೆ ಎಂದರೆ ಸರಿ.ಸದರಿ ವಜಾ ಆದೇಶದ ವಿರುದ್ದ ಗೌಃ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ರಿಟ್ ಅರ್ಜಿ ಇನ್ನೂ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಹಾಗಾಗಿ ನಾನು ಸದರಿ ಸರ್ವೆ ನಂ 115 ರ ಪೋಡುಗಳನ್ನು ಪ್ರಶ್ನಿಸಿರುವುದರಿಂದ ಮತ್ತು ಸದರಿ ಪೋಡುಗಳನ್ನು

ರದ್ದುಪಡಿಸುವಂತೆ ಮತ್ತು ಹೊಸದಾಗಿ ಪೋಡು ಮಾಡಲು ಕೇಳಿರುವುದರಿಂದ ಸರ್ವೆ ನಂ 115 ರಲ್ಲಿರುವ ಒಟ್ಟು 6 ಎಕರೆ 33 ಗುಂಟೆ ಜಮೀನುಗಳಲ್ಲಿ ಇಂತಹವರದ್ದೇ ಇಷ್ಟು ಇಷ್ಟು ಜಮೀನು ಎಂದು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.

ಹಾಗಾಗಿ ನಾನು ಮಾನ್ಯ ಗೌಃ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದವಾದ ತರುವಾಯ ಈ ದಾವೆಯನ್ನು ಹೂಡಬೇಕಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಸರ್ವೆ ನಂ 115 ರ ಒಟ್ಟು ವಿಸ್ತೀರ್ಣದ ಜಮೀನುಗಳು ಅನುಭವದಾರರಿಗೆ ಇನ್ನೂ ಅಂತಿಮವಾಗಿ ತೀರ್ಮಾನವಾಗಿದ ಕಾರಣ ಮತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಇದೇ ವಿಚಾರದ ಕುರಿತು ರಿಟ್ ಅರ್ಜಿ ವಿಚಾರಣೆಗೆ ಬಾಕಿ ಇರುವ ಕಾರಣ ಈ ದಾವೆಯನ್ನು ನಾನು ಸದರಿ ಆದೇಶ ಬಂದ ತರುವಾಯ ಹೂಡಬೇಕಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ಯಾವುದೇ ಜಮೀನನ್ನು ಖರೀದಿಸಿದ ತರುವಾಯ ಸದರಿ ಕ್ರಯದ ವ್ಯವಹಾರ ಸರ್ವೆ ಅಳತೆಯ ನಿಬಂದನೆಗೆ ಒಳಪಡುತ್ತದೆ ಎಂದರೆ ಸರಿ.

ನಾನು ಹಾಜರುಪಡಿಸಿರುವ ನಿಪಿ-1 ರಲ್ಲಿ ಸರ್ವೆ ನಂ 109/5 ರಲ್ಲಿ 10 ವರೆ ಗುಂಟೆ , 115/5 ರಲ್ಲಿ 17 ಗುಂಟೆ  ಎಂದು ನಮೂದು ಇದೆ ಎಂದರೆ ಸರಿ. ನಿಪಿ-1 ಕ್ಕೆ ಈ ದಾವೆಯ ಪ್ರತಿವಾದಿಗಳು ಪಕ್ಷಗಾರರು ಅಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಉಲ್ಲೇಖವಿರುವ ಚೆಕ್ಕುಬಂದಿಗೂ ಸರ್ವೆ ದಾಖಲೆಗಳಲ್ಲಿನ ಚೆಕ್ಕುಬಂದಿಗೂ ಒಂದಕ್ಕೊಂದು  ತಾಳೆಯಾಗುವುದಿಲ್ಲ ಎಂದರೆ ಸಾಕ್ಷಿ ನಾವು ಖರೀದಿಸುವ ಸಮಯಕ್ಕೆ ಸದರಿ ಆಸ್ತಿಯ ಸುತ್ತಾಮುತ್ತಾ ಯಾರು ಅನುಭವದಲ್ಲಿದ್ದರೋ ಅವರ ಹೆಸರನ್ನು ಬರೆಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಉಲ್ಲೇಖವಿರುವ ಚೆಕ್ಕುಬಂದಿಗಳನ್ನು ನಾನು ಸರ್ವೆ ದಾಖಲೆಗಳೊಂದಿಗೆ ತಾಳೆ ನೋಡಿಲ್ಲ ಎಂದರೆ ಸರಿ. ನಾನು ದಾವಾಸ್ತಿಯನ್ನು ಖರೀದಿಸುವ ಸಮಯಕ್ಕೆ ಪಹಣಿಯನ್ನು ಮತ್ತು ಸರ್ವೆ ದಾಖಲೆಗಳನ್ನು ಪರಿಶೀಲಿಸಿ ಸದರಿ ದಾಖಲೆಗಳಲ್ಲಿನ ಚೆಕ್ಕುಬಂದಿಗಳನ್ನು ನಮೂದಿಸಿ ಖರೀದಿಸಿಲ್ಲ ಎಂದರೆ ಸಾಕ್ಷಿ ಮಾರಿದವರು ತೋರಿಸಿದ ಜಾಗವನ್ನು ನಾನು ಖರೀದಿಸಿರುತ್ತೇನೆ. ನಾನು ಖರೀದಿಸುವ ಸಮಯಕ್ಕೆ ಪಹಣಿ, ಮ್ಯೂಟೇಶನ್, ಆಕಾರ್ ಬಂದ್, ಸರ್ವೆ ಸ್ಕೇಚ್ ಎಲ್ಲವನ್ನೂ ನೋಡಿ ಪರಿಶೀಲಿಸಿ ಖರೀದಿಸಿರುತ್ತೇನೆ.

ನಿಪಿ-1 ರಲ್ಲಿ ಉಲ್ಲೇಖವಿರುವ  ಚೆಕ್ಕುಬಂದಿಗಳು ಸರಿಯಿಲ್ಲ ಎಂದರೆ  ಸಾಕ್ಷಿ ಅಕ್ಕಪಕ್ಕ ಯಾರು ಇದ್ದರೋ ಅವರ ಹೆಸರುಗಳನ್ನು ನಮೂದಿಸಿ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ.

(ಸದರಿ ಸಮಯದಲ್ಲಿ ನಿಪಿ-1 ರಂತೆ ನಿಶಾನೆಗೊಳಗಾದ ದಾಖಲೆಯನ್ನು ಡಿಜಿಟಲಿ ಪ್ರಮಾಣೀಕೃತ ಪ್ರತಿ ಅಲ್ಲ ಎಂದುಪ್ರತಿವಾದ ಪರ ವಕೀಲರು ತಕರಾರು ತೆಗೆದಿರುತ್ತಾರೆ. )

ನನಗೆ ನಿಪಿ-1 ರ ಪ್ರಮಾಣೀಕೃತ ಪ್ರತಿಯನ್ನು ಉಪನೊಂದಾಣಾಧಿಕಾರಿಗಳ ಕಚೇರಿಯಿಂದ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆಯಿಲ್ಲ ಎಂದರೆ ಸರಿ.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.